## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**: 2020-21ನೇ ಸಾಲಿನಲ್ಲಿ ರಾಷ್ಟ್ರೀಯ ಹಾಗೂ ಸ್ಥಳೀಯ ಮೇಳಗಳಲ್ಲಿ ಭಾಗವಹಿಸಲು ಮತ್ತು ರೋಡ್ ಷೋಗಳನ್ನು ಆಯೋಜಿಸಲು ಅನುಮೋದನೆ.

**ಓದಲಾಗಿದೆ**: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ರವರ ಕಡತ ಸಂಖ್ಯೆ: KSTDC/PRO/3/2020-PRO- KSTDC

* * * * *

**ಪ್ರಸ್ತಾವನೆ:**

ಮೇಲೆ ಓದಲಾದ ನಿಗಮದ ಕಡತದಲ್ಲಿ ಕರ್ನಾಟಕ ಪ್ರವಾಸೋದ್ಯಮವನ್ನು ರಾಷ್ಟ್ರೀಯ ಮಟ್ಟದಲ್ಲಿ ಉತ್ತೇಜಿಸುವ ಸಲುವಾಗಿ ಇಲಾಖೆಯಿಂದ ಡೊಮೆಸ್ಟಿಕ್ ಮೇಳಗಳನ್ನು ಆಯೋಜಿಸಿರುವಂತೆ ನಿಗಮವು 2019-20ನೇ ಸಾಲಿನಲ್ಲಿ ಸರ್ಕಾರದ ಅನುಮೋದಿತ ದೇಶೀಯ ರೋಡ್ ಷೋಗಳನ್ನು ಯಶಸ್ವಿಯಾಗಿ ಆಯೋಜಿಸಿದ್ದು, ಸದರಿ ರೋಡ್ ಷೋಗಳ ಆಯೋಜನೆಯಿಂದ, ಪ್ರವಾಸೋದ್ಯಮ ಸ್ಟೇಕ್ ಹೋಲ್ಡರ್ಸ್‌ಗಳ ಭಾಗವಹಿಸುವಿಕೆಗೆ ಹಾಗೂ ಕರ್ನಾಟಕದ ಕಲೆ, ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಉತ್ಪನ್ನಗಳ ಕುರಿತು ರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಹಾಗೂ ಮಾಹಿತಿ ವಿನಿಮಯಕ್ಕೆ ಒಂದು ಉತ್ತಮ ವೇದಿಕೆಯಾಗಿ ಆಯೋಜನೆಗೊಂಡಿದ್ದು, ಉತ್ತಮ ಅಭಿಪ್ರಾಯಗಳು ಸಹ ವ್ಯಕ್ತವಾಗಿರುತ್ತದೆಂದು ವ್ಯವಸ್ಥಾಪಕ ನಿರ್ದೇಶಕರು ವರದಿ ಮಾಡಿರುತ್ತಾರೆ.

ಮುಂದುವರೆದು, 2020-21ನೇ ಸಾಲಿನಲ್ಲಿಯೂ ಸಹ ಕರ್ನಾಟಕ ಪ್ರವಾಸೋದ್ಯಮದ ಕುರಿತು ಇನ್ನೂ ಪರಿಣಾಮಕಾರಿಯಾಗಿ ಪ್ರಚಾರ ಕೈಗೊಳ್ಳುವ ಮತ್ತು ಕರ್ನಾಟಕ ಪ್ರವಾಸೋದ್ಯಮಕ್ಕೆ ಇನ್ನೂ ಹೆಚ್ಚಿನ ಉತ್ತೇಜನ ನೀಡುವ ಮೂಲಕ, ಕರ್ನಾಟಕ ಪ್ರವಾಸೋದ್ಯಮವನ್ನು ದೇಶದ ಅತ್ಯುನ್ನತ ಪ್ರವಾಸಿ ತಾಣವಾಗಿ ಮಾರ್ಪಡಿಸಲು, ಕೆಳಕಂಡ ನಗರಗಳಲ್ಲಿ ದೇಶೀಯ ರೋಡ್ ಷೋ ಹಾಗೂ ಈವೆಂಟ್ಸ್ ಗಳನ್ನು ಆಯೋಜಿಸಬಹುದಾಗಿದೆ ಎಂದು ಅಭಿಪ್ರಾಯಿಸಿರುತ್ತಾರೆ.

| SL No | Exhibition Name | Place | Tentative Dates | Space | | ROADSHOWS | Tentative Dates |
|---|---|---|---|---|---|---|---|
| 1 | GITB | JAIPUR | Apr-20 | | 1 | Jaipur | Apr-20 |
| | ITB INDIA | MUMBAI | 15- 17th April 2020 | | | | |
| 2 | ABP TOURIST SPOT | KOLKATA | Jun-20 | | | | |
| 3 | TTF | Kolkata | 3-5 July 2020 | 100 Sq M | 2 | Kolkata | 06th July 2020 |
| 4 | TTF | Hyderabad | 10-11 July 2020 | 100 Sq M | 3 | Hyderabad | 13th July 2020 |
| 5 | IITM | Chennai | 31 July-2 Aug 2020 | 100 Sq M | 4 | Chennai | 3rd August 2020 |
| 6 | IITM | Bengaluru | 7-9 August 2020 | 150 Sq M | | - | - |
| 7 | TTF | Ahmadabad | 4-6 Sept 2020 | 150 Sq M | 5 | Ahmadabad | 7th Sep 2020 |
| 8 | TTF | SURAT | Sept 2020 | | | - | - |
| 9 | IATO ANNUAL CONVENTION | KOLKATA | Sept 2020 | | | - | - |
| 10 | Paryatan Parv | New Delhi | Sept 2020 | 100 Sq M | | - | - |
| 11 | IITM | New Delhi | 20-22 Sept 2020 | 60 Sq Mtr | 6 | Chandigarh | 23rd Sept 2020 |
| | | | | | 7 | Lucknow | 25th Sept 2020 |
| 12 | IGTM | DELHI | Sept 2020 | | 8 | Delhi | Sept 2020 |
| 13 | IITM | Pune | Oct 2020 | 100 Sq M | 9 | Pune | Oct 2020 |
| 14 | IITM | Cochin | Jan 2021 | 100 Sq M | 10 | Cochin | Jan 2021 |
| 15 | SATTE | New Delhi | Jan 2021 | 150 Sq M | | | |

| | | | | | | | |
|---|---|---|---|---|---|---|---|
| 16 | Bharat Parv | New Delhi | Jan 2021 | 125 Sq M | | | |
| 17 | Holiday Expo | Coimbatore | Jan 2021 | 60 Sq M | 11 | Coimbatore | Jan 2021 |
| 18 | OTM | Mumbai | 04 - 06 Feb 2021 | 150 Sq M | 12 | Mumbai | 8th Feb 2021 |
| 19 | TTF | Bengaluru | Feb 2021 | 150 Sq M | | - | - |
| 20 | ITM | GOA | Feb 2021 | | | - | - |

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ , 2020-21ನೇ ಸಾಲಿನಲ್ಲಿ ಕರ್ನಾಟಕ ಪ್ರವಾಸೋದ್ಯಮದ ಕುರಿತು ಇನ್ನೂ ಪರಿಣಾಮಕಾರಿಯಾಗಿ ಪ್ರಚಾರ ಕೈಗೊಳ್ಳುವ ನಿಟ್ಟಿನಲ್ಲಿ ಮೇಲ್ಕಂಡಂತೆ ದೇಶೀಯ ರೋಡ್ ಷೋ ಹಾಗೂ ಈವೆಂಟ್ಸ್‌ಗಳನ್ನು ಆಯೋಜಿಸುವ ಕುರಿತು ಈ ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು ಕೋರಿದ್ದಾರೆ.

1. 2021ರ ಜನವರಿ ಮಾಹೆಯಲ್ಲಿ ಪ್ರಸ್ತಾಪಿಸಲಾದ ನವದೆಹಲಿ ರೋಡ್ ಶೋ ಹೊರತುಪಡಿಸಿ, ಪ್ರಸ್ತಾಪಿಸಿರುವಂತೆ 2020-21ರ ಅವಧಿಯಲ್ಲಿ ರೋಡ್ ಶೋ ಮತ್ತು ಡೊಮೆಸ್ಟಿಕ್ ಮೇಳಗಳ ಪಟ್ಟಿಗೆ ಅನುಮೋದನೆ ನೀಡುವುದು.
2. 2020-21ನೇ ಸಾಲಿನ ಎಲ್ಲಾ ರೋಡ್ ಶೋ ಮತ್ತು ಇವೆಂಟ್‌ಗಳನ್ನು ನಡೆಸಲು ಸರ್ಕಾರದ ಪರವಾಗಿ ಕೆಎಸ್‌ಟಿಡಿಸಿಯನ್ನು ಏಜೆನ್ಸಿಯಾಗಿ ನೇಮಿಸಿ ಆದೇಶ ಹೊರಡಿಸುವುದು. ಒಂದುವೇಳೆ ಹೆಚ್ಚುವರಿ ಇವೆಂಟ್‌ಗಳು ಅಥವಾ ರೋಡ್‌ಷೋಗಳನ್ನು ಸರ್ಕಾರ/ ಪ್ರವಾಸೋದ್ಯಮ ಇಲಾಖೆಯಿಂದ ಆಯೋಜಿಸಿದ್ದಾದಲ್ಲಿ, ಕೆಎಸ್‌ಟಿಡಿಸಿಯು ಅವುಗಳನ್ನು ಅದೇ ಆಯ್ಕೆ ಏಜೆನ್ಸಿಯ ಮೂಲಕವೇ ನಡೆಸಲು ಅನುಮತಿ ನೀಡುವುದು.
3. ಈ ಇವೆಂಟ್‌ಗಳು ಮತ್ತು ರೋಡ್ ಶೋಗಳನ್ನು ನಡೆಸಲು ಅನುದಾನವನ್ನು ಅವಶ್ಯಕತೆ ಅಥವಾ ಲಭ್ಯತೆಗೆ ಅನುಗುಣವಾಗಿ ಕಾಲಕಾಲಕ್ಕೆ ಇಲಾಖೆಯಿಂದ ಕೆಎಸ್‌ಟಿಡಿಸಿಗೆ ಬಿಡುಗಡೆ ಮಾಡುವುದು. ಹಾಗೆಯೇ, ರೋಡ್ ಶೋ ಮತ್ತು ಈವೆಂಟ್‌ಗಳ ಆಯೋಜನೆಗಾಗಿ ಕೆಎಸ್‌ಟಿಡಿಸಿ ವತಿಯಿಂದ ಏಜೆನ್ಸಿಯನ್ನು ಪ್ರತ್ಯೇಕವಾಗಿ, ಇ-ಪ್ರೊಕ್ಯೂರ್ಮೆಂಟ್ / ಕೆಟಿಪಿಪಿ ನಿಯಮಗಳ ಮೂಲಕ ಆಯ್ಕೆ ಮಾಡುವುದು.

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:TOR/55TDO/2020, ದಿನಾಂಕ: 10.03.2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪ್ರವಾಸೋದ್ಯಮವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರಪಡಿಸಲು ಹಾಗೂ ಕರ್ನಾಟಕದ ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಇತರೆ ರಾಜ್ಯಗಳಿಗೆ ಪರಿಚಯಿಸುವ ಸಲುವಾಗಿ ಕೆಳಕಂಡ 20 ರಾಷ್ಟ್ರೀಯ ಮತ್ತು ಸ್ಥಳೀಯ ಮೇಳಗಳಲ್ಲಿ ನಿಯಮಾನುಸಾರ ಭಾಗವಹಿಸಲು ಹಾಗೂ 12 ರೋಡ್ ಷೋಗಳನ್ನು ನಿಯಮಾನುಸಾರ ಆಯೋಜಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

| SL No | Exhibition Name | Place | Tentative Dates | Space | | ROADSHOWS | Tentative Dates |
|---|---|---|---|---|---|---|---|
| 1 | GITB | JAIPUR | Apr-20 | | 1 | Jaipur | Apr-20 |
| | ITB INDIA | MUMBAI | 15- 17th April 2020 | | | | |
| 2 | ABP TOURIST SPOT | KOLKATA | Jun-20 | | | | |
| 3 | TTF | Kolkata | 3-5 July 2020 | 100 Sq M | 2 | Kolkata | 06th July 2020 |
| 4 | TTF | Hyderabad | 10-11 July 2020 | 100 Sq M | 3 | Hyderabad | 13th July 2020 |
| 5 | IITM | Chennai | 31 July-2 Aug 2020 | 100 Sq M | 4 | Chennai | 3rd August 2020 |
| 6 | IITM | Bengaluru | 7-9 August | 150 Sq M | | - | - |

| | | | | | | | |
|---|---|---|---|---|---|---|---|
| 7 | TTF | Ahmadabad | 4-6 Sept 2020 | 150 Sq M | 5 | Ahmadabad | 7th Sep 2020 |
| 8 | TTF | SURAT | Sept 2020 | | | - | - |
| 9 | IATO ANNUAL CONVENTION | KOLKATA | Sept 2020 | | | - | - |
| 10 | Paryatan Parv | New Delhi | Sept 2020 | 100 Sq M | | - | - |
| 11 | IITM | New Delhi | 20-22 Sept 2020 | 60 Sq Mtr | 6 | Chandigarh | 23rd Sept 2020 |
| | | | | | 7 | Lucknow | 25th Sept 2020 |
| 12 | IGTM | DELHI | Sept 2020 | | 8 | Delhi | Sept 2020 |
| 13 | IITM | Pune | Oct 2020 | 100 Sq M | 9 | Pune | Oct 2020 |
| 14 | IITM | Cochin | Jan 2021 | 100 Sq M | 10 | Cochin | Jan 2021 |
| 15 | SATTE | New Delhi | Jan 2021 | 150 Sq M | | | |
| 16 | Bharat Parv | New Delhi | Jan 2021 | 125 Sq M | | | |
| 17 | Holiday Expo | Coimbatore | Jan 2021 | 60 Sq M | 11 | Coimbatore | Jan 2021 |
| 18 | OTM | Mumbai | 04 - 06 Feb 2021 | 150 Sq M | 12 | Mumbai | 8th Feb 2021 |
| 19 | TTF | Bengaluru | Feb 2021 | 150 Sq M | | - | - |
| 20 | ITM | GOA | Feb 2021 | | | - | - |

ಮೇಲ್ಕಂಡ ರಾಷ್ಟ್ರೀಯ ಹಾಗೂ ಸ್ಥಳೀಯ ಮೇಳಗಳು ಹಾಗೂ ರೋಡ್ ಷೋಗಳನ್ನು ಆಯೋಜಿಸುವ ಕಾರ್ಯವನ್ನು ನಿಯಮಾನುಸಾರ ಕೆ.ಎಸ್.ಟಿ.ಡಿ.ಸಿ., ಕೈಗೊಳ್ಳತಕ್ಕದ್ದು. ಈ ಇವೆಂಟ್‌ಗಳು ಮತ್ತು ರೋಡ್ ಶೋಗಳನ್ನು ನಡೆಸಲು ಅನುದಾನವನ್ನು ಅವಶ್ಯಕತೆ ಅಥವಾ ಲಭ್ಯತೆಗೆ ಅನುಗುಣವಾಗಿ ಕಾಲಕಾಲಕ್ಕೆ ಪ್ರವಾಸೋದ್ಯಮ ಇಲಾಖೆಯಿಂದ ಕೆಎಸ್‌ಟಿಡಿಸಿಗೆ ಬಿಡುಗಡೆ ಮಾಡುವುದು. ಹಾಗೆಯೇ, ರೋಡ್ ಶೋ ಮತ್ತು ಈವೆಂಟ್‌ಗಳ ಆಯೋಜನೆಗಾಗಿ ಕೆಎಸ್‌ಟಿಡಿಸಿ ವತಿಯಿಂದ ಏಜೆನ್ಸಿಯನ್ನು ಪ್ರತ್ಯೇಕವಾಗಿ, ಇ-ಪ್ರೊಕ್ಯೂರ್ಮೆಂಟ್ / ಕೆಟಿಪಿಪಿ ನಿಯಮಗಳ ಮೂಲಕ ಆಯ್ಕೆ ಮಾಡುವುದು. ಒಂದುವೇಳೆ ಹೆಚ್ಚುವರಿ ಇವೆಂಟ್‌ಗಳು ಅಥವಾ ರೋಡ್‌ಷೋಗಳನ್ನು ಸರ್ಕಾರ/ ಪ್ರವಾಸೋದ್ಯಮ ಇಲಾಖೆಯಿಂದ ಆಯೋಜಿಸಿದ್ದಾದಲ್ಲಿ, ಕೆಎಸ್‌ಟಿಡಿಸಿಯು ಅವುಗಳನ್ನು ಅದೇ ಆಯ್ದ ಏಜೆನ್ಸಿಯ ಮೂಲಕವೇ ನಡೆಸಲು ಅನುಮತಿ ನೀಡಲಾಗಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಆಇ/01/ಟಿಎಫ್‌ಪಿ/2019, ದಿ:4-7-2019ರಲ್ಲಿ ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

10/3/2020

(ಬಿ.ಎನ್. ಯತಿರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಇವರಿಗೆ:

1. ಮಹಾಲೇಖಪಾಲರು(ಲೆಕ್ಕಪತ್ರ/ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು
2. ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಖನಿಜ ಭವನ, ಬೆಂಗಳೂರು
3. ವ್ಯವಸ್ಥಾಪಕ ನಿರ್ದೇಶಕರು,ಕೆ.ಎಸ್.ಟಿ.ಸಿ., ಬೆಂಗಳೂರು
4. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಕೆ.ಆರ್.ವೃತ್ತ, ಬೆಂಗಳೂರು
5. ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ: ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿಗಳು.